## ನಮ್ಮ ರಾಯರ ಅದ್ಭುತ ಜೀವನಕ್ರಮ

ಶ್ರೀಮದಪ್ಪಣಾಚಾರ್ಯರು ಶ್ರೀ ರಾಘವೇಂದ್ರ ಸ್ವಾಮಿಗಳ ಸಾಕ್ಷಾತ್ ಶಿಷ್ಯರು. ಅನೇಕ ವರ್ಷಗಳ ಕಾಲ ರಾಯರ ಜೊತೆಯಲ್ಲಿದ್ದೇ ಅವರಿಂದ ವಿದ್ಯೆಯನ್ನು ಪಡೆದ ಮಹಾನುಭಾವರು. ಗುರುಗಳಲ್ಲಿ ಮಹಾಭಕ್ತಿಯನ್ನು ಮಾಡುತ್ತಿದ್ದ ಪುಣ್ಯಪುರುಷರು. ತಮ್ಮ ಗುರುಗಳ ಕುರಿತು ಅನೇಕ ಸ್ತೋತ್ರಗಳನ್ನು ರಚಿಸಿ ನಮ್ಮನ್ನು ಅನುಗ್ರಹಿಸಿರುವ ಕಾರುಣ್ಯಮೂರ್ತಿಗಳು. ಸಮಸ್ತ ಧರ್ಮಶಾಸ್ತ್ರಗಳನ್ನೂ ಅರಿತಿದ್ದ, ಮತ್ತೊಬ್ಬರಿಗೆ ಮಾಡಲು ಅಸಾಧ್ಯವಿದ್ದ ಧರ್ಮದ ಆಚರಣೆಗಳನ್ನು ಮಾಡುತ್ತಿದ್ದ ಶ್ರೀ ರಾಘವೇಂದ್ರಸ್ವಾಮಿಗಳ ನಿತ್ಯದ ದಿನಚರಿಯನ್ನು ಶ್ರೀ ಅಪ್ಪಣಚಾರ್ಯರು ರಾಘವೇಂದ್ರದಂಡಕ ಎನ್ನುವ ಗದ್ಯಸ್ತೋತ್ರದಲ್ಲಿ ಅದ್ಭುತವಾಗಿ ದಾಖಲಿಸಿದ್ದಾರೆ.

ಸದಾಚಾರವನ್ನು ಪಾಲಿಸಬೇಕಾದರೆ ಕಾಲ ಅನುಕೂಲವಿರಬೇಕು. ಪ್ರದೇಶ ಸರಿಯಾಗಿರಬೇಕು.

ಜೊತೆಯವರು ಸಹಕರಿಸಬೇಕು. ಧರ್ಮಾಚರಣೆಗೆ ಸಮಯವೇ ಇಲ್ಲದಂತೆ, ಧರ್ಮಾಚರಣೆಗೆ ಅವಕಾಶವೇ ಇಲ್ಲದ ಪ್ರದೇಶದಲ್ಲಿ, ಧರ್ಮಾಚರಣೆಯನ್ನು ಮಾಡಬೇಡ ಎಂದು ಹೇಳುವ ಜನರ ಮಧ್ಯದಲ್ಲಿ ನಾವಿಂದು ಬದುಕುತ್ತಿದ್ದೇವೆ. ಹೀಗಾದರೆ ಉದ್ಧೃತಿಯ ಮಾತೆಲ್ಲಿ? ಈ ಪರಿಸ್ಥಿತಿಗೆ ಕಾರಣ ನಮ್ಮ ಪಾಪಗಳು. ಆ ಪಾಪ ಪರಿಹೃತವಾದರೆ ಸದಾಚಾರಕ್ಕೆ ಸಮಯವೂ ದೊರೆಯುತ್ತದೆ, ಪ್ರದೇಶವೂ ದೊರೆಯುತ್ತದೆ, ಸದಾಚಾರವನ್ನು ಪ್ರೋತ್ಸಾಹಿಸುವ ಗಂಡ, ಹೆಂಡತಿ, ಮಕ್ಕಳು ದೊರೆಯುತ್ತಾರೆ.

ಈ ಪಾಪ ಕಳೆದುಕೊಳ್ಳುವ ಬಗೆ ಹೇಗೆ? ಮಹಾನುಭಾವರ ಧರ್ಮದ ಆಚರಣೆಯನ್ನು ನಿರಂತರ ಸ್ಮರಣೆ ಮಾಡುವದರಿಂದ ನಮ್ಮ ಧರ್ಮದ ಆಚರಣೆಗೆ ಪ್ರತಿಬಂಧಕವಾದ ಪಾಪಗಳನ್ನು ಕಳೆದುಕೊಳ್ಳುತ್ತೇವೆ.

ಸದಾಚಾರಸ್ಮೃತಿಯ ಅಧ್ಯಯನ ನಡೆಯುತ್ತಿರುವ ಈ ಸಂದರ್ಭದಲ್ಲಿ ಸಮಗ್ರ ಮಾಧ್ವಸಮಾಜದ ಗುರುಗಳಾದ, ಮಧ್ವಸಿದ್ಧಾಂತದ

ಆಧಾರಸ್ತಂಭರಾದ, ಶ್ರೀ ರಾಘವೇಂದ್ರಸ್ವಾಮಿಗಳ ದಿನಚರಿಯ ಚಿಂತನೆ ಮಾಡೋಣ. ನಮ್ಮನ್ನು ಸದಾ ಸದಾಚಾರಿಗಳಾಗುವಂತೆ ಅನುಗ್ರಹಿಸಿ ಎಂದು ಅವರನ್ನು ಭಕ್ತಿಯಿಂದ ಪ್ರಾರ್ಥಿಸೋಣ.

ಈ ಸ್ತೋತ್ರವನ್ನು ನಿರಂತರ ಪಠಿಸುವದರಿಂದ ಆ ರೀತಿಯ ಫಲವನ್ನು ಪಡೆಯುತ್ತೇವೆ, ಸದಾಚಾರಸ್ಮೃತಿಯಲ್ಲಿ ಶ್ರೀಮದಾಚಾರ್ಯರು ತಿಳಿಸಿದ ಧರ್ಮಾನುಷ್ಠಾನ ಮಾಡಲು ಅರ್ಹತೆಯನ್ನು ಗಳಿಸುತ್ತೇವೆ. ಅದಕ್ಕೆ ಪ್ರತಿಬಂಧಕವಾದ ಪಾಪಗಳನ್ನು ಪರಿಹಾರ ಮಾಡಿಕೊಳ್ಳುತ್ತೇವೆ. [1]

ಸಂನ್ಯಾಸಿಗಳು ಬ್ರಾಹ್ಮಮುಹೂರ್ತದಲ್ಲಿ ಅಂದರೆ ಅರುಣೋದಯ ಕಾಲದಲ್ಲಿ ಸ್ನಾನವನ್ನು ಮಾಡಬೇಕು. ಅಂದರೆ ಅದಕ್ಕಿಂತಲೂ ಮುಂಚೆಯೇ ಎದ್ದಿರಬೇಕು. ಭಗವಂತನ ಅನುಗ್ರಹದಿಂದ ನಿದ್ರೆಯನ್ನು ಗೆದ್ದಿದ್ದ ಶ್ರೀರಾಘವೇಂದ್ರಸ್ವಾಮಿಗಳು

---

[1] ಶ್ರೀರಾಘವೇಂದ್ರದಂಡಕ ಮತ್ತು ಶ್ರೀರಾಘವೇಂದ್ರವಿಜಯ ಈ ಎರಡೂ ಕೃತಿಗಳಲ್ಲಿರುವ ವಿಷಯಗಳನ್ನು ಸಂಗ್ರಹಿಸಿ ಇಲ್ಲಿ ನಿರೂಪಣೆ ಮಾಡುತ್ತೇನೆ.

ಬ್ರಾಹ್ಮಮುಹೂರ್ತಕ್ಕಿಂತ ತುಂಬ ಮುಂಚೆಯೇ ಎದ್ದಿರುತ್ತಿದ್ದರು.

ಸಕಲ ಧರ್ಮಗಳನ್ನು ಅನುಷ್ಠಾನ ಮಾಡುವದರಿಂದ ಗೃಹಸ್ಥ ಏನು ಪುಣ್ಯ ಗಳಿಸುತ್ತಾನೆಯೋ ಅದಕ್ಕಿಂತಲೂ ಸಾವಿರಪಟ್ಟು ಮಿಗಿಲಾದ ಪುಣ್ಯವನ್ನು ಯತಿಗಳ ಸೇವೆ ಮಾಡುವ ಯತಿಸೇವಕರು ಪಡೆಯುತ್ತಾರೆ ಎಂದು ಶ್ರೀಮದಾಚಾರ್ಯರು ಗೀತಾಭಾಷ್ಯದಲ್ಲಿ ತಿಳಿಸುತ್ತಾರೆ. ಯತಿಕುಲತಿಲಕರಾದ ಆ ರಾಘವೇಂದ್ರಸ್ವಾಮಿಗಳ ಸೇವೆಯನ್ನು ಮಾಡಲೆಂದೇ ಹುಟ್ಟಿಬಂದಿದ್ದ ಮಹಾನುಭಾವರಾದ ಶಿಷ್ಯರು ರಾಯರಿಗಿಂತ ಮುಂಚೆಯೇ ಎದ್ದು ಹರಿಗುರುಸ್ತೋತ್ರಗಳನ್ನು ಪಠಣ ಮಾಡುತ್ತಿದ್ದರು.

ಶಿಷ್ಯರು ಸುಶ್ರಾವ್ಯವಾಗಿ  ಸ್ತೋತ್ರಗಳನ್ನು ಕೇಳುತ್ತಲೇ ರಾಘವೇಂದ್ರ ಸ್ವಾಮಿಗಳು ಏಳುತ್ತಿದ್ದರು. ಏಳುತ್ತಲೇ,

**ದೇವಸಂಘಾನ್ನೃಷೀನ್ ಸಿದ್ಧಮುಖ್ಯಾನ್**
**ಗುರೂಂಶ್ಚಾಪಿ ಮೂಲಾದಿಸಂಜ್ಞಾನ್ ನಮಸ್ಕೃತ್ಯ**

## ಪಶ್ಚಾನ್ಮಲೋತ್ಸರ್ಜನಾಯಾಪ್ಯ ಬಾಹ್ಯಪ್ರದೇಶಂ ತತೋ ಹಸ್ತ ಪಾದೌಪ್ರತಿಕ್ಷಾಲ್ಯ ದಂತಾಂತರಾಧೂಯ ಗಂಡೂಷಪಾನೀಯಮಾನೀಯ ಪೂತ್ಕೃತ್ಯ

ದೇವರನ್ನು, ದೇವತೆಗಳನ್ನು, ಋಷಿಗಳನ್ನು, ಪರಮಾತ್ಮನ ಸಾಕ್ಷಾತ್ಕಾರ ಪಡೆದ ಸಿದ್ಧರನ್ನು, ಮೂಲಗುರುಗಳಾದ ವೇದವ್ಯಾಸದೇವರನ್ನು, ಆದಿಗುರುಗಳಾದ ಶ್ರೀಮದಾಚಾರ್ಯರನ್ನು, ಶ್ರೀ ಪದ್ಮನಾಭತೀರ್ಥರು, ಶ್ರೀ ನರಹರಿತೀರ್ಥರು, ಶ್ರೀ ಮಾಧವತೀರ್ಥರು, ಶ್ರೀ ಅಕ್ಷೋಭ್ಯತೀರ್ಥರು, ಶ್ರೀಮಟ್ಟೀಕಾಕೃತ್ಪಾದರು, ಶ್ರೀ ವಿದ್ಯಾಧಿರಾಜರು, ಶ್ರೀಕವೀಂದ್ರತೀರ್ಥರು, ಶ್ರೀವಾಗೀಶತೀರ್ಥರು, ಶ್ರೀರಾಮಚಂದ್ರತೀರ್ಥರು, ಶ್ರೀವಿಬುಧೇಂದ್ರ ತೀರ್ಥರು, ಶ್ರೀಜಿತಾಮಿತ್ರತೀರ್ಥರು, ಶ್ರೀರಘುನಂದನತೀರ್ಥರು, ಶ್ರೀಸುರೇಂದ್ರತೀರ್ಥರು, ಶ್ರೀ ವಿಜಯೀಂದ್ರತೀರ್ಥರೆಂಬ ಪರಮಗುರುಗಳನ್ನು ಸ್ಮರಿಸಿ, ಗುರುಗಳಾದ ಶ್ರೀ ಸುಧೀಂದ್ರತೀರ್ಥರನ್ನು ಭಕ್ತಿಯಿಂದ ನೆನೆದು ಏಳುತ್ತಿದ್ದರು.

ಆ ನಂತರ ಶಾಸ್ತ್ರತಿಳಿಸಿದ ಕ್ರಮದಲ್ಲಿ ಶೌಚವನ್ನು ಆಚರಿಸಿ, ದೇಹದ ದೋಷಗಳನ್ನು ಭಗವಂತನ

ನಿರ್ದೋಷತ್ವವನ್ನು ಚಿಂತಿಸುತ್ತ ಹಲ್ಲುಗಳನ್ನು ಶುಭ್ರಗೊಳಿಸಿ, ತುಳಸಿಗೆ ನಮಸ್ಕರಿಸಿ, ಭಗವಂತನ ಸ್ತೋತ್ರಗಳನ್ನು ಪಠಿಸಿ ರಾಯರು ಸ್ನಾನಕ್ಕೆ ಸಿದ್ಧರಾಗುತ್ತಿದ್ದರು.

ಅನುಸಂಧಾನಗಳ ಆಕರವಾದ ಪ್ರಾತಃಸಂಕಲ್ಪಗದ್ಯದಂತಹ ಸರ್ವಶ್ರೇಷ್ಠ ಪ್ರಾತರ್ಗದ್ಯವನ್ನು ಬರೆದು ನೀಡಿದ ಆ ಗುರುಸಾರ್ವಭೌಮರು ಅದೆಷ್ಟು ಅನುಸಂಧಾನವನ್ನು ಮಾಡುತ್ತ ಸ್ತೋತ್ರಗಳನ್ನು ಪಠಿಸುತ್ತಿದ್ದರೋ, ತಿಳಿಯುವ ಸಾಮರ್ಥ್ಯವಾದರೂ ಮನುಷ್ಯರಿಗೆಲ್ಲಿಯದು?

**ನದ್ಯಂತರೋದ್ಭಾಸಿಮೃತ್ಸ್ನಾ ಚ ಪೂರ್ವಂ ತತಸ್ತತ್ರ**
**ಸಂಕಲ್ಪ್ಯ ಗತ್ವಾ ನದೀಮಧ್ಯಮಾಮಂತ್ರ್ಯ ದೇವಾನ್**
**ಪರಿನ್ನಾಮವಾಚ್ಯಾನ್ ತತಃಶ್ರೀಶಭಕ್ತ್ಯಾ**
**ಮನೋವಾಚ್ಯಮಬ್ಜೇಕ್ಷಣಸ್ತೋತ್ರಜಾಲೇನ ನೇತ್ರೇ**
**ಪರಿದ್ದರ್ಶನೇನ ಸ್ತುತೇನಶ್ರುತೀ**
**ಶ್ರೀಶನಿರ್ಮಾಲ್ಯಗಂಧೇನ ನಾಸಾಂ**
**ನಿಜಾತ್ಮಾನಮೀಶಾಪರೋಕ್ಷೇಣ**

## ಸರ್ವಾಂಗಮುದ್ಧೃತ್ಸರಿತ್ತೋಯಜಾಲೇನ ಸಂಸಿಚ್ಯತತ್ರಾವಗಾಹ್ಯಾಥ

ನದಿಯ ಮೃತ್ತಿಕೆಯನ್ನು ಮೈಗೆಲ್ಲ ಲೇಪಿಸಿಕೊಂಡು, ಸಂಕಲ್ಪವನ್ನು ಮಾಡಿ ನದಿಯ ಮಧ್ಯಕ್ಕೆ ಹೋಗಿ ಯಾವ ನದಿಯಲ್ಲಿ ಸ್ನಾನ ಮಾಡುತ್ತಿದ್ದರೋ ಆ ನದಿಗಿಂತ ಉತ್ತಮವಾದ ಎಲ್ಲ ನದಿಗಳ ಸನ್ನಿಧಾನವನ್ನು ಪ್ರಾರ್ಥಿಸಿ, ವಿಷ್ಣುಭಕ್ತಿಯಿಂದ ಮನಸ್ಸಿಗೆ ಸ್ನಾನ ಮಾಡಿಸಿ, ದೇವರ ಸ್ತೋತ್ರಗಳಿಂದ ವಾಗಿಂದ್ರಿಯಕ್ಕೆ ಸ್ನಾನ ಮಾಡಿಸಿ, ಕಣ್ತುಂಬಿ ನದಿಯನ್ನು ನೋಡುವದರಿಂದ ಕಣ್ಣುಗಳಿಗೆ ಸ್ನಾನ ಮಾಡಿಸಿ, ಭಗವಂತನ ನಿರ್ಮಾಲ್ಯವನ್ನು ಆಘ್ರಾಣಿಸುವದಿರಿಂದ ಮೂಗಿಗೆ ಸ್ನಾನವನ್ನು ಮಾಡಿಸಿ, ಶಿಷ್ಯರು ಪಠಿಸುತ್ತಿದ್ದ ಸ್ತೋತ್ರವನ್ನು ಕೇಳುವದರಿಂದ ಕಿವಿಗಳಿಗೆ ಸ್ನಾನವನ್ನು ಮಾಡಿಸಿ ಹೃದಯದಲ್ಲಿ ಭಗವಂತನನ್ನು ಕಾಣುವದರಿಂದ ಜೀವನಿಗೆ ಸ್ನಾನ ಮಾಡಿಸಿ ನಂತರ ಇಡಿಯ ದೇಹವನ್ನು ನದಿಯಲ್ಲಿ ಮುಳುಗಿಸಿ ಶುದ್ಧಗೊಳಿಸುತ್ತಿದ್ದರು. ಇದು, ನಮ್ಮ ರಾಘವೇಂದ್ರಸ್ವಾಮಿಗಳು ಸ್ನಾನ ಮಾಡುತ್ತಿದ್ದ ಕ್ರಮ.

ಮೂತ್ರದ ಅಂಗದಿಂದಲೇ ಹುಟ್ಟಿಬಂದ ಈ ಶರೀರ ಎಂದಿಗೂ ಮಡಿಯಾಗಲು ಸಾಧ್ಯವಿಲ್ಲ. ಆದರೆ, ಈ ಶರೀರದಲ್ಲಿ ಸರ್ವೋತ್ತಮನ ಸನ್ನಿಧಾನವನ್ನು ಚಿಂತನೆ ಮಾಡುವದರಿಂದ ಮಡಿಯಾಗುತ್ತೇವೆ. ನಮ್ಮ ರಾಯರು ಕಣ್ಣಿಂದ ಹರಿಯನ್ನು ಕಾಣುತ್ತ, ಕಿವಿಯಿಂದ ಅವನ ಕಥೆಯನ್ನು ಕೇಳುತ್ತ, ನಾಲಿಗೆಯಿಂದ ಅವನ ನಾಮವನ್ನು ನುಡಿಯುತ್ತ, ಮೂಗಿನಿಂದ ಅವನ ಪ್ರಸಾದವನ್ನು ಆಘ್ರಾಣಿಸುತ್ತ, ತ್ವಗಿಂದ್ರಿಯದಿಂದ ಅವನ ಪರಮಪವಿತ್ರಪ್ರತಿಮೆಗಳನ್ನು ಸ್ಪರ್ಶ ಮಾಡುತ್ತ, ಕೈಗಳಿಂದ ಅವನ ಪೂಜೆ ಮಾಡುತ್ತ, ಕಾಲ್ಗಳಿಂದ ಅವನ  ಕ್ಷೇತ್ರಗಳಲ್ಲಿ ಸಂಚರಿಸುತ್ತ, ಅದ್ಭುತವಾದ ಬ್ರಹ್ಮಚರ್ಯದಿಂದ ಅವನನ್ನು ಒಲಿಸುತ್ತ ತಮ್ಮ ದೇಹವನ್ನು ಶುದ್ಧವಾಗಿಟ್ಟದ್ದಷ್ಟೇ ಅಲ್ಲ, ಅವನನ್ನು ಹೃದಯದಲ್ಲಿ ಸಾಕ್ಷಾತ್ತಾಗಿ ಕಾಣುತ್ತ ತಮ್ಮ ಜೀವವನ್ನೇ ಧನ್ಯಗೊಳಿಸಿಕೊಂಡಿದ್ದರು.

ನಾವೆಲ್ಲರೂ ದೇವರ ಧ್ಯಾನ ಮಾಡಲು ಪ್ರಯತ್ನಿಸಿದರೆ, ಆ ಗುರುಗಳು ತಮ್ಮ ಹೃದಯದರಸನನ್ನು ಕಂಡು ಪೂಜಿಸುತ್ತಿದ್ದರು.

**ತತ್ತೀರಮಧ್ಯಾಸ್ಯ ಸಿಕ್ತಾಂಗಮುದ್ಧೃತ್ಯ ಕೌಪೀನಮಾರ್ದ್ರಂ ಪರಿತ್ಯಜ್ಯ ಧೌತಂ ಸಮಾಸ್ಥಾಯ ಸದ್ಗೋಪಿಕಾಚಂದನೇನಾಂಗಮಾಲಿಪ್ಯ ಮುದ್ರಾಂ ಸಮಾಧಾಯ ಮಂತ್ರಾರ್ಥಮಾಕಲ್ಪ್ಯ ಜಪ್ತ್ವಾಥ ಸನ್ಮಂತ್ರಸಂದೋಹಮಾಸೇವ್ಯ ಗತ್ವಾ ಮಠಂ ಸ್ವೀಯಮಾನಂದರೂಪಂ ನಿಜಾನೇಕಸಚ್ಛಾತ್ರವೃಂದಾಯ ವಿದ್ಯಾವದನ್ ವೇದಶಾಸ್ತ್ರಾದಿಭಾವಂಮುದಾಭೇದವಾದಾದಿದಂ ವಿನೋದೇನ ಮಧ್ಯಾಹ್ನಮಾನೀಯ**

ಸ್ನಾನ ಮುಗಿಸಿ ನದಿಯ ತೀರಕ್ಕೆ ಬಂದು ಒದ್ದೆಯ ಕೌಪೀನವನ್ನು ತೊರೆದು ಶುಭ್ರವಾದ ಒಣಗಿದ ಕೌಪೀನ ವಸ್ತ್ರಗಳನ್ನು ಧರಿಸಿ, ಶ್ರೇಷ್ಠವಾದ ರೀತಿಯಲ್ಲಿ ಗೋಪೀಚಂದ್ರಮುದ್ರೆಗಳನ್ನು ಧರಿಸಿ, ಮಂತ್ರಾರ್ಥಚಿಂತನೆಯೊಂದಿಗೆ ಅನೇಕ ಮಂತ್ರಗಳ ಜಪವನ್ನು ಮಾಡುತ್ತಿದ್ದರು.

ಸಂನ್ಯಾಸಿಗಳ ಸ್ನಾನ ಸೂರ್ಯೋದಯಕ್ಕಿಂತ 96 ನಿಮಿಷಗಳ ಮುಂಚೆ. ಅಷ್ಟು ಹೊತ್ತಿಗೆ ಸ್ನಾನ ಮಾಡಿ ಜಪಕ್ಕೆ ಕೂಡುತ್ತಿದ್ದ ರಾಯರು ಸೂರ್ಯೋದಯವಾಗಿ ಶಿಷ್ಯರೆಲ್ಲರೂ ಪಾಠಕ್ಕೆ

ಸಿದ್ಧರಾಗುವವರೆಗೆ ಮಂತ್ರಗಳ ಜಪದಲ್ಲಿ ತಲ್ಲೀನರಾಗಿರುತ್ತಿದ್ದರು.

ಹೀಗೆ ನದಿಯ ಪವಿತ್ರ ತೀರದಲ್ಲಿಯೇ ಜಪ ಮುಗಿಸಿದ ಗುರುಗಳು, ಮಠಕ್ಕೆ ಬಂದು, ತಮಗೆ ದಿವ್ಯಾವಾದ ಆನಂದವನ್ನು ನೀಡುವ ಪವಿತ್ರ ಕಾಯಕಕ್ಕೆ — ಪಾಠ ಹೇಳುವ ಸರ್ವೋತ್ತಮ ಭಗವದಾರಧನೆಗೆ — ಅಣಿಯಾಗುತ್ತಿದ್ದರು.

ಶಾಸ್ತ್ರಗಳ ಪಾಠ ಹೇಳುವದು ಅವರಿಗೆ ಅತ್ಯಂತ ಪ್ರಿಯವಾದ ಕಾರ್ಯವಾಗಿತ್ತು. ಯಾರು ವೇದಾಂತಸಾಮ್ರಾಜ್ಯದ ಪೀಠದ ಅಧಿಪತಿಗಳಾಗಿ ಕುಳಿತು ಶಾಸ್ತ್ರದ ರಕ್ಷಣೆಯನ್ನು ಮಾಡಬೇಕೆಂದು ಸ್ವಯಂ ವಿದ್ಯಾಭಿಮಾನಿದೇವತೆಯಾದ ಸರಸ್ವತೀದೇವಿ ಅಪೇಕ್ಷೆ ಪಟ್ಟಳೋ, ಯಾರು ಮುನಿತ್ರಯರ ಅಭಿಪ್ರಾಯವನ್ನು ಸುಸ್ಪಷ್ಟವಾಗಿ ಬಲ್ಲರೋ, ಯಾರ ಗ್ರಂಥಗಳು ಇಂದಿಗೂ ಸಜ್ಜನವಿದ್ವಾಂಸರಿಗೆ ತತ್ವಜ್ಞಾನದ ಅಮೃತವನ್ನುಣಿಸುತ್ತದೆಯೋ ಅಂತಹ ಶ್ರೀರಾಘವೇಂದ್ರಸ್ವಾಮಿಗಳ ಪಾಠದ ವೈಭವವನ್ನು ವರ್ಣಿಸುವ ಶಕ್ತಿ ಯಾವ ಮನುಜನಿಗುಂಟು?

ಅ ಮಹಾಗುರಗಳ ಮುಖದಿಂದಲೇ ತತ್ವೋಪದೇಶವನ್ನು ಪಡೆಯಲೋಸುಗ ನೂರಾರು ಜನ ಮಹಾನುಭಾವರು ಅವತರಿಸಿಬಂದಿದ್ದರು. ಅಂತಹ **ಸಚ್ಛಾತ್ರವೃಂದಾಯ** ಸಚ್ಛಿಷ್ಯರ ಸಮೂಹಕ್ಕೆ ರಾಯರು ಸುಪ್ರಸನ್ನರಾಗಿ ವಿದ್ಯೆಗಳ ಉಪದೇಶ ಮಾಡುತ್ತ, ವೇದ ವೇದಾಂತಗಳ ಅಭಿಪ್ರಾಯವನ್ನು ತಿಳಿಸುತ್ತ, ಭೇದವಾದ, ತಾರತಮ್ಯಸಿದ್ಧಾಂತ, ವಿಷ್ಣುಸರ್ವೋತ್ತಮತ್ವ ಮುಂತಾದ ಸಿದ್ಧಾಂತಗಳ ತಿರುಳನ್ನು ಅರುಹುತ್ತ ಮಧ್ಯಾಹ್ನದವರೆಗೆ ಪಾಠ ಮಾಡುತ್ತಿದ್ದರು.

ಆ ನಂತರ ರತ್ನಗಳಿಂದ, ಕೆತ್ತನೆಗಳಿಂದ, ಕಂಬಗಳಿಂದ ಪರಮಾದ್ಭುತವಾಗಿದ್ದ ಪೀಠದ ಮಧ್ಯದಲ್ಲಿ ದಿವ್ಯಾಭರಣಗಳಿಂದ ಭೂಷಿತನಾಗಿದ್ದ ಭಗವಂತನನ್ನು ಕುಳ್ಳಿರಿಸಿ ಕಲಶದಲ್ಲಿ ಗಂಗಾದಿ ತೀರ್ಥಗಳನ್ನು ಆವಾಹಿಸಿ, ಗಂಧ, ಅಕ್ಷತೆಗಳನ್ನು, ತುಳಸೀ, ಮಲ್ಲಿಗೆ, ಸಂಪಿಗೆ, ಕಲ್ಹಾರ, ಜಾಜಿ ಮುಂತಾದ ಪುಷ್ಪಗಳನ್ನು ಭಕ್ತಿಯಿಂದ ತೆಗೆದುಕೊಂಡು ವಿಷ್ಣುಸಹಸ್ರನಾಮ ಮುಂತಾದ ಸ್ತೋತ್ರಗಳನ್ನು ಪಠಿಸುತ್ತ

ಶ್ರೀರಾಘವೇಂದ್ರಗುರುಸಾರ್ವಭೌಮರು ಭಗವಂತನನ್ನು ಅರ್ಚಿಸುತ್ತಿದ್ದರು.

ಆ ಬಳಿಕ ಶುದ್ಧವಾದ ಪದಾರ್ಥಗಳನ್ನು ಭಗವಂತನಿಗೆ ನಿವೇದಿಸಿ ದಿವ್ಯವಾದ ನೀರಾಜನಗಳಿಂದ ಭಗವಂತನಿಗೆ ಆರತಿಯನ್ನು ಬೆಳಗಿ ವಿದ್ವದ್ವರೇಣ್ಯರನ್ನು ಜೊತೆಯಲ್ಲಿ ಕೂಡಿಸಿಕೊಂಡು ಭೋಜನವನ್ನು ಮಾಡುತ್ತಿದ್ದರು.

ಆ ನಂತರ, ವಿದ್ವಾಂಸರೊಂದಿಗೆ ಶಾಸ್ತ್ರಾರ್ಥದ ಚರ್ಚೆಯನ್ನು ಮಾಡುತ್ತ, ಸಾಯಂಸಂಧ್ಯೆಯನ್ನು ಮುಗಿಸಿ ತಮ್ಮ ಶಿಷ್ಯರಿಗೆ ಭಾಗವತಾದಿ ಪುರಾಣಗಳನ್ನು ಹೇಳಲು ಆದೇಶ ಮಾಡುತ್ತಿದ್ದರು. ವೈಶಂಪಾಯನರು ಹೇಳುತ್ತಿದ್ದ ಮಹಾಭಾರತವನ್ನು ವೇದವ್ಯಾಸದೇವರು ಶ್ರವಣ ಮಾಡುತ್ತಿದ್ದಂತೆ, ಭಕ್ತಿಯಿಂದ ಭರಿತರಾಗಿ ಶ್ರೀರಾಘವೇಂದ್ರಸ್ವಾಮಿಗಳು ಶ್ರೀಮದ್ ಭಾಗವತಾದಿಗ್ರಂಥಗಳ ಅನುವಾದವನ್ನು ಕೇಳುತ್ತಿದ್ದರು.

ಆ ನಂತರ ಮಂತ್ರಜಪವನ್ನು ಮಾಡಿ,

ಸಾಯಂಪೂಜೆಯನ್ನು ಮಾಡಿ, ಶಿಷ್ಯರಿಗೆ ಮಂತ್ರಾಕ್ಷತೆಯನ್ನು ಅನುಗ್ರಹಿಸಿ, ಅವರಿಗೆ ರಾತ್ರಿಭೋಜನಕ್ಕೆ  ಅನುಮತಿಯನ್ನಿತ್ತು ತಾವು ಶ್ರೇಷ್ಠ ಯುಕ್ತಿಗಳ ಸಮುದ್ರಗಳಾದ ನ್ಯಾಯಾಮೃತನ್ಯಾಯಸುಧಾಅನುವ್ಯಾಖ್ಯಾನ ಮುಂತಾದ ಗ್ರಂಥಗಳನ್ನು ಅಧ್ಯಯನ ಮಾಡುತ್ತ, ತತ್ವಗಳನ್ನು ಇದಮಿತ್ಥಂ ಎಂದು ನಿರ್ಣಯಿಸಿಕೊಂಡು ಮಧ್ಯರಾತ್ರಿಯವರೆಗೆ ಅಧ್ಯಯನವನ್ನು ಮುಂದುವರೆಸಿ ಆ ನಂತರ ಮಲಗುತ್ತಿದ್ದರು.

ಹೀಗೆ ಬೆಳಗಿನಿಂದ ರಾತ್ರಿಯವರೆಗೆ ಕೇವಲ ವಿಷ್ಣುಪೂಜೆ, ಶಾಸ್ತ್ರವ್ಯಾಖ್ಯಾನದಲ್ಲಿಯೇ ಆಸಕ್ತರಾಗಿದ್ದರ ಫಲವಾಗಿ ಪರಮಾತ್ಮ ಅವರ ಕನಸಿನಲ್ಲಿಯೂ ಅವರಿಗೆ ದರ್ಶನವನ್ನೀಯುತ್ತಿದ್ದ ಎಂದು ರಾಘವೇಂದ್ರಸ್ವಾಮಿಗಳ ಅಂತರಂಗದ ಭಕ್ತರೂ, ಅವರಿಂದಲೆ ಅವರ ಅನುಭವಗಳನ್ನು ಕೇಳಿ ತಿಳಿದಿದ್ದ ಶ್ರೀ ಅಪ್ಪಣಾಚಾರ್ಯರು ದಾಖಲಿಸುತ್ತಾರೆ — **ತತಃ ಸ್ವಪ್ನಕಾಲೇ ರಮಾಕಾಂತಮಾಲೋಕ್ಯ ಹೃಷ್ಟಾಂತರಂಗಃ ಸಮುತ್ಥಾಯ.**

ಹೃದಯದಲ್ಲಿ ಸಾಕ್ಷಾತ್ತಾಗಿಯೇ ಭಗವಂತನನ್ನು ಕಂಡಿದ್ದ ಆ ಮಹಾನುಭಾವರಿಗೆ ಕನಸಿನಲ್ಲಿಯೂ ಶ್ರೀಹರಿಯನ್ನು ಕಾಣುವದು ದೊಡ್ಡ ಮಾತಲ್ಲ. ಆದರೆ ಕಣ್ಣು ಬಿಟ್ಟು ಕುಳಿತರೂ ಶ್ರೀಹರಿಯನ್ನು ಕಾಣಲಾಗದ ನಮಗೆ ತುಂಬ ಅಚ್ಚರಿಯ ಮಾತು.

ಕನಸಿನಲ್ಲಿ ಶ್ರೀಹರಿಯ ದರ್ಶನದಿಂದ ಪುಳಕಿತರಾದ ರಾಘವೇಂದ್ರಸ್ವಾಮಿಗಳು ಪ್ರಫುಲ್ಲವಾದ ಮನಸ್ಸಿನಿಂದ ಎದ್ದು ಮತ್ತೆ ಹಿಂದಿ ದಿವಸದಂತೆ ಕರ್ಮಗಳ ಅನುಷ್ಠಾನವನ್ನು ಮಾಡುತ್ತಿದ್ದರು.

ಹೀಗೆ ಶ್ರೇಷ್ಠ ಸದಾಚಾರವನ್ನು ಪಾಲಿಸುತ್ತ, ಶಿಷ್ಯರಿಗೆ ತತ್ವೋಪದೇಶ ಮಾಡುತ್ತ, ಇಡಿಯ ಭರತಭೂಮಿಯನ್ನು ಸಂಚರಿಸಿ ದುರ್ವಾದಿಗಳ ನಿಗ್ರಹವನ್ನು ಮಾಡುತ್ತ ಶ್ರೀ ರಾಘವೇಂದ್ರಸ್ವಾಮಿಗಳು ತುಂಗಭದ್ರಾ ತೀರದ ಮಂತ್ರಾಲಯದಲ್ಲಿ ವೃಂದಾವನಸ್ಥರಾಗಲು ಸಂಕಲ್ಪಿಸುತ್ತಾರೆ. ಶ್ರೀರಾಮನ ಪಾದಸ್ಪರ್ಶವನ್ನು ಪಡೆದ ಪವಿತ್ರ ಶಿಲೆಯಿಂದ ತಾವೇ ಸ್ವಯಂ

ವೃಂದಾವನವನ್ನು ಮಾಡಿಸಿ, ಅದರಲ್ಲಿ ಭಗವಂತನ ವಿವಿಧರೂಪಗಳನ್ನು ಆವಾಹಿಸಿ, ಅರ್ಚಿಸಿ ಶ್ರಾವಣ ಕೃಷ್ಣ ದ್ವಿತೀಯಾ ಭಾನುವಾರದಂದು



ಸಶರರೀರರಾಗಿಯೇ ವೃಂದಾವನ ಪ್ರವೇಶ ಮಾಡುತ್ತಾರೆ.

ಇಂದಿಗೂ ಆ ಪರಮಪವಿತ್ರ ವೃಂದಾವನದಲ್ಲಿ ಸನ್ನಿಹಿತರಾಗಿ  ಸೇವೆ ಮಾಡುವ ಭಕ್ತೋತ್ತಮರಿಗೆ

**ಸತ್ಕಾರಸಾಕಾರಸೌಭಾಗ್ಯಪೂರ್ಣಾಯುರಾರೋಗ್ಯ ಸೌಜನ್ಯವಾಗ್ಧೈರ್ಯಸುಸ್ಥೈರ್ಯಮಾಧುರ್ಯಗಾಂಭೀರ್ಯಚಾತುರ್ಯಸೌಂದರ್ಯಸೌಧ್ಯಾಸಸರ್ವೇಷ್ಟ ಸುಜ್ಯೇಷ್ಠಸತ್ಕರ್ಮ ಸಂಕಲ್ಪ್ಯಸತ್ತೀರ್ಥಯಾತ್ರಾವೃತಪ್ರೌಢವಾಪೀತಟಾಕಾದಿನಿರ್ಮಾಣಸಂಭೂತಪುಣ್ಯವ್ರಜಾನೇಕಭಾಸ್ವತ್ತಪಃಸಾರಹೃದ್ಧ್ಯಾನಸದ್ದೈವಪೂಜಾದ್ವಿಜೋತ್ತಂಸಪಾದಾರ್ಚನಾನೇಕಭಾಸ್ವನ್ಮಹಾದಾನಧರ್ಮೌಘಮೌಲಿಪ್ರಭಾರೂಢವೃಂದಾವನಸ್ತೋತ್ರಪಾತ್ರಪ್ರಭೋ**

ಸಮಾಜದಲ್ಲಿ ಉತ್ತಮ ಸ್ಥಾನ, ಉತ್ತಮ ದೇಹ, ಸೌಭಾಗ್ಯ, ಪೂರ್ಣಾಯುಷ್ಯ, ಆರೋಗ್ಯ, ಸಜ್ಜನಿಕೆ, ವಾಕ್ಶಕ್ತಿ, ಧೈರ್ಯ, ಸ್ಥೈರ್ಯ, ಮಾಧುರ್ಯ, ಗಾಂಭೀರ್ಯ, ಚಾತುರ್ಯ, ಸೌಂದರ್ಯ, ಉತ್ತಮ ಜ್ಞಾನ ಮುಂತಾದ ಗುಣಗಳನ್ನು ಅನುಗ್ರಹಿಸುತ್ತ,

ಕಷ್ಟಗಳ ಪರಿಹಾರಕ್ಕಾಗಿ ಬರುವ ಭಕ್ತರಿಗೆ

**ಕುಷ್ಠಾಂಧಬಾಧಿರ್ಯಮೂಕತ್ವಪಂಗುತ್ವಕುಬ್ಜತ್ವವಕ್ರತ್ವದುರ್ಜ್ಞಾನದುರ್ಭೀತಿದೌರ್ಜನ್ಯಚಾಪಲ್ಯಚಾಂಚಲ್ಯಚಿಂತಾಮನಸ್ತಾಪದುರ್ವ್ಯಾಧಿದಾರಿದ್ರ್ಯನೈಷ್ಠುರ್ಯವಂಧ್ಯಾತ್ವವೈರುಧ್ಯಮಾತ್ಸರ್ಯಸಮ್ಮೋಹಮತ್ತತ್ವಲುಬ್ಧತ್ವಕ್ಷುದ್ರತ್ವಮುಖ್ಯಾಖಿಲಪ್ರೌಢದೋಷೋಪದೋಷಾಖ್ಯಸದ್ವೃಕ್ಷಕುಂಜಾಟವೀದಾಹದಾವಾಗ್ನಿ-ರಾಜತ್ಸುಪಾದಾರವಿಂದಪ್ರಭೋ**

ಪರಿಹರಿಸಲಾಗ ರೋಗಗಳನ್ನು ಪರಿಹರಿಸುತ್ತ, ಕುರುಡುತನ, ಕಿವುಡುತನ, ಮೂಕತನ, ಕುಂಟುವಿಕೆ, ದೇಹ ಬೆಳೆಯದ ಖಾಯಿಲೆ, ಸೊಟ್ಟಗಿರುವ ಖಾಯಿಲೆ, ದುರ್ಜ್ಞಾನ, ದುಷ್ಟರಿಂದ ಭೀತಿ, ದುಷ್ಟತನ, ಚಾಪಲ್ಯ. ಚಾಂಚಲ್ಯ, ಚಿಂತೆ, ಮನಸ್ತಾಪ, ವ್ಯಾಧಿ, ದಾರಿದ್ರ್ಯ, ಮಾತು ಮನಸ್ಸುಗಳ ಕಾಠಿಣ್ಯ, ಬಂಜೆತನ, ಪರಸ್ಪರ ವಿರೋಧ, ಮಾತ್ಸರ್ಯ, ಮೋಹ, ಉನ್ಮತ್ತತೆ, ಲೋಭ, ಕ್ಷುದ್ರತನ, ಮುಂತಾದ ಮಹಾದೋಷಗಳನ್ನು ಕಳೆಯುತ್ತ ವಿರಾಜಮಾನರಾಗಿದ್ದಾರೆ.

ಆ ಗುರುಗಳನ್ನು ಶ್ರೀ ಅಪ್ಪಣಾಚಾರ್ಯರು ಪ್ರಾರ್ಥಿಸಿದ ಬಗೆ ಹೀಗಿದೆ —

**ಸ್ವಾಮಿರಾಜಪ್ರಭೋ ರಾಮಚಂದ್ರಪ್ರಭೋ ರಾಘವೇಂದ್ರಪ್ರಭೋ ಪಾಹಿಮಾಂ ರಕ್ಷಮಾಮೇಹಿ ಮಾಂ ಯಾಹಿ ಮಾಂ ಸರ್ವದಾ ಸರ್ವದೇಶೇಷು ಸರ್ವಪ್ರಕಾರೇಣ ಸರ್ವೇಷ್ಟಸಿದ್ಧ್ಯರ್ಥ-ಮತ್ಯಂತಮಾರ್ದ್ರೇಣ ಚಿತ್ತೇನ ಸಂಸೇವಮಾನಂ ಸದಾಬಾಲಬಾಲೋಪಮಾನಂ ತವ ಶ್ರೀಪದಾಂಭೋಜದಾಸಾನುದಾಸಂ ಸದಾ ಪಾಹಿ ಮಾಂ ಪಾಹಿ ಜೀಯಾದ್ಭವಾನಸ್ತು ಮೇ ಶ್ರೀಃ ಸದಾ ನಮಸ್ತೇ ನಮಸ್ತೇ ವಚಸ್ತೇ ಶಿರಸ್ತೇ ಕರಸ್ತೇ ಯಶಸ್ತೇ ನಮಸ್ತೇ ನಮಸ್ತೇ ನಮಸ್ತೇ ನಮಃ।**

ಓ ಸಂನ್ಯಾಸಿಗಳ ಒಡೆಯ, ಓ ರಾಮಚಂದ್ರನ ದಾಸನೇ, ಓ ರಾಘವೇಂದ್ರಗುರೋ, ನನ್ನನ್ನು ಪಾಲಿಸಿ, ನನ್ನನ್ನು ರಕ್ಷಿಸಿ. ನನ್ನೊಳಗೆ ನೀವು ಬನ್ನಿ, ನಿಮ್ಮಲ್ಲಿಗೆ ನನ್ನನ್ನು ಕರೆಸಿಕೊಳ್ಳಿ.

ನನ್ನನ್ನು ಸರ್ವರೀತಿಯಲ್ಲಿಯೂ ಸರ್ವಪ್ರದೇಶ ದಲ್ಲಿಯೂ ಸರ್ವಪ್ರಕಾರದಲ್ಲಿಯೂ ರಕ್ಷಿಸಿ.

ಮನಸ್ಸಿನ ಅಭೀಷ್ಟಗಳ ಪೂರ್ತಿಗಾಗಿ ನಿಮ್ಮನ್ನು ಆರ್ದ್ರಮನಸ್ಸಿನಿಂದ ಆರಾಧಿಸುತ್ತಿರುವ ವ್ಯಕ್ತಿ ನಾನು, ಸಣ್ಣವರಲ್ಲಿಯೇ ಸಣ್ಣವನು. ನಿಮ್ಮ ಪಾದಕಮಲಗಳ ದಾಸಾನು ದಾಸ. ನನ್ನನ್ನು ರಕ್ಷಿಸಿ ಸ್ವಾಮಿ.

ನಿಮಗೆ ಜಯವಾಗಲಿ. ನಿಮ್ಮ ಅನುಗ್ರಹದಿಂದ ನನ್ನ ಉದ್ಧಾರವಾಗಲಿ.

ನಿಮಗೆ ನಮಸ್ಕಾರ. ಮತ್ತೊಮ್ಮೆ ನಮಸ್ಕಾರ.

ನಿಮ್ಮ ಗ್ರಂಥಗಳಿಗೆ ನಮಸ್ಕಾರ. ಹರಿಗೆ ಮಣಿದ ನಿಮ್ಮ ಶಿರಸ್ಸಿಗೆ ನಮಸ್ಕಾರ.

ಹರಿಯ ಪೂಜಿಸಿದ, ಆಚಾರ್ಯರ ಗ್ರಂಥಗಳನ್ನು ವ್ಯಾಖ್ಯಾನ ಮಾಡಿದ ನಿಮ್ಮ ಕರಗಳಿಗೆ ನಮಸ್ಕಾರ.

ಜಗತ್ತಿನ ಸಕಲ ಸಜ್ಜನರೂ ಕೊಂಡಾಡುವ ನಿಮ್ಮ ಯಶಸ್ಸಿಗೆ ನಮಸ್ಕಾರ.

ನಿಮಗೆ ನಮಸ್ಕಾರ. ಮತ್ತೆ ಮತ್ತೆ ನಮಸ್ಕಾರ.

ಇಂತಹ ಒಂದು ಅದ್ಭುತವಾದ ಸ್ತೋತ್ರವನ್ನು ಬರೆದು ನೀಡಿ ನಮ್ಮನ್ನು ಅನುಗ್ರಹಿಸಿದ ಶ್ರೀ ಅಪ್ಪಣ್ಣಾಚಾರ್ಯರಿಗೂ ಭಕ್ತಿಯಿಂದ ಸಾಷ್ಟಾಂಗನಮಸ್ಕಾರಗಳನ್ನು ಸಲ್ಲಿಸಿ, ಪರಮಾತ್ಮನ ಮಹಾವಿಭೂತಿರೂಪದ ಸನ್ನಿಧಾನವನ್ನು ಹೊತ್ತ, ಶ್ರೀಮದಾಚಾರ್ಯರ ಶ್ರೀಮಟ್ಟೀಕಾಕಾಕೃತ್ಪಾದರ ಪ್ರತಿಮಾಸ್ಥಾನೀಯರಾದ ಶ್ರೀರಾಘವೇಂದ್ರಗುರುಸಾರ್ವಭೌಮರ ಚರಣ ಕಮಲಗಳಿಗೆ ಸರ್ವಸ್ವವನ್ನು ಸಮರ್ಪಿಸಿಕೊಳ್ಳುತ್ತೇನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ



# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore  571122, Karnataka, India

nagendracharya@yahoo.co.in

WhatsApp:  9901 551 491